# ಓ.ಎಸ್.ನಂ.12/2017

ದಿನಾಂಕಃ 04-01-2020 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಿ .ಡಬ್ಲ್ಯೂಃ 2

**ಪಾಟೀ ಸವಾಲುಃ ಪ್ರತಿವಾದಿಯರ ಪರವಾಗಿ ಶ್ರೀ ಡಿ ಎನ್ ಪಿ ವಕೀಲರಿಂದಃ-**

ವಾದಿಯು ನನ್ನ ಸ್ವಂತ ಅಣ್ಣ ಎಂದರೆ ಸರಿ . ನಿಪಿ-8 ಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ ಎಂದರೆ ಸರಿ . ನಿಪಿ-8 ಆಗುವ ಸಮಯದಲ್ಲಿ ನನಗೆ 20-22 ವರ್ಷ ವಯಸ್ಸು ಆಗಿರಬಹುದು. ನಿಪಿ-8 ರಲ್ಲಿ ಬರೆದಿರುವ ಒಕ್ಕಣಿಕೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ . ನಿಪಿ-8 ಕ್ರಯಪತ್ರದಲ್ಲಿ ಪೂರ್ವ ಪಶ್ಚಿಮ 18 ಗಜ ಉತ್ತರ ದಕ್ಷಿಣ 14 ಗಜ ಎಂದು ಬರೆಯಲಾಗಿದೆ ಎಂದರೆ ಬರೆದಿರಬಹುದು ಆದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದಲ್ಲಿರುವ ಆಸ್ತಿಯ ಉತ್ತರಕ್ಕೆ ರಶೀದ್ ಸಾಬ್ ರವರ ಮನೆ , ಪೂರ್ವಕ್ಕೆಃ ವಾದಿಯ ತಂದೆಯ ಮನೆ ಮತ್ತು ಕಾಂಪೌಂಡ್ , ಪಶ್ಚಿಮಕ್ಕೆಃ ರಸ್ತೆ, ದಕ್ಷಿಣಕ್ಕೆಃ ರಸ್ತೆ ಇರುತ್ತದೆ. ಸದರಿ ಕ್ರಯಪತ್ರದ ಪ್ರಕಾರ ವಾದಿಯು ಸ್ವಾಧೀನತೆಯನ್ನು ಪಡೆದಿರುತ್ತಾರೆ.

ದಾವಾ ಎ ಶೆಡ್ಯೂಲ್ ಆಸ್ತಿಯು ಪೂರ್ವ ಪಶ್ಚಿಮ 45, ಉತ್ತರ ದಕ್ಷಿಣ 54 ಅಡಿ ಎಂದು ಅಸೆಸ್ಮೆಂಟ್ ನಕಲಿನಲ್ಲಿ ಯಾವಾಗ ಬದಲಾವಣೆ ಆಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ದಕ್ಷಿಣ ಭಾಗದಲ್ಲಿ 15 ಇಂಟು 45 ಅಡಿ ಜಾಗವನ್ನು ಪ್ರತಿವಾದಿಯು ಒತ್ತುವರಿ ಮಾಡಿ ಮನೆಯನ್ನು ಕಟ್ಟಿರುತ್ತಾರೆಂದು ಪಂಚಾಯಿತಿಯವರು ಅಳತೆ ಮಾಡಿ ಬರವಣಿಗೆಯಲ್ಲಿ ಕೊಟ್ಟಿರುತ್ತಾರೆ. ಸದರಿ ಸಮಯದಲ್ಲಿ ನಾನು ಹಾಜರಿರಲಿಲ್ಲ ಎಂದರೆ ಸರಿ . ವಾದಿಯ ಹೇಳಿಕೆಯ ಪ್ರಕಾರ ನಾನು ಪ್ರತಿವಾದಿಯು 15 ಇಂಟು 45 ಅಡಿ ಒತ್ತುವರಿ ಮಾಡಿರುತ್ತಾರೆಂದು ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರ ಸರಿಯಲ್ಲ. ಸಾಕ್ಷಿಯು ಮುಂದುವರೆದು ಹೇಳುವುದೇನೆಂದರೆ ನಾನು ಪ್ರತ್ಯೇಕ್ಷವಾಗಿ ನೋಡಿರುವುದನ್ನು ಹೇಳುತ್ತಿದ್ದೇನೆ. ವಾದಿಯು ಎ ಶೆಡ್ಯೂಲ್ ಆಸ್ತಿಯನ್ನು ಖರೀದಿಸಿದಾಗಿನಿಂದಲೂ ಸುತ್ತಲೂ ತಂತಿ ಕಂಬವನ್ನು ಹಾಕಿರುತ್ತಾರೆ. ವಾದಿಯು ಕ್ರಯಪತ್ರದ ಪ್ರಕಾರ 45 ಇಂಟು 54 ಅಡಿ ನಿವೇಶನಕ್ಕೆ ಸಂಪೂರ್ಣವಾಗಿ ತಂತಿ ಕಂಬವನ್ನು ಹಾಕಿರುತ್ತೇವೆ. ಸದರಿ ತಂತಿ ಕಂಬವನ್ನು ಹಾಕಿದ ಸಂಧರ್ಭದಲ್ಲಿ ಯಾವುದೇ ಒತ್ತುವರಿಯನ್ನು ಮಾಡಿರುವುದಿಲ್ಲ.

ನಿಪಿ-8 ರ ಕ್ರಯಪತ್ರದ ಪ್ರಕಾರ ಪೂರ್ವ ಪಶ್ಚಿಮ 54 ಅಡಿ ಉತ್ತರ ದಕ್ಷಿಣ 45 ಅಡಿ ಇರುತ್ತದೆ ಎಂದರೆ ಸದರಿ ಸಮಯದಲ್ಲಿ ಇರಬಹುದು. ವಾದಿಯು ಪಂಚಾಯಿತಿ ಸದಸ್ಯನಾಗಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ವಾದಿಗೆ ಸಂಬಂಧಿಸಿದ ಯಾವುದೇ ಜಾಗವನ್ನು ಒತ್ತುವರಿ ಮಾಡರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-8 ರ ಪ್ರಕಾರ ದಕ್ಷಿಣಕ್ಕೆ ಹನುಮಣ್ಣನವರ ಹಿತ್ತಲು ಇತ್ತು ಎಂದರೆ ಸರಿ . ನಾವೆಲ್ಲರೂ ಪಂಚಾಯಿತಿಯೊಂದಿಗೆ ಶಾಮೀಲಾಗಿ ದಕ್ಷಿಣಕ್ಕೆ ರಸ್ತೆ ಎಂದು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-8 ರಲ್ಲಿ ನಮೂದಿಸಿರುವ ಆಸ್ತಿಗೆ ಮಾತ್ರ ಮಾಲೀಕರು ದಾವಾ ಆಸ್ತಿಯಲ್ಲಿ ನಮೂದಿಸಿರುವ ಆಸ್ತಿಗೆ ಮಾಲೀಕರಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಶೆಡ್ಡನ್ನು ಹಾಕಿ 2 ರಿಂದ 2 ½ ವರ್ಷವಾಗಿರಬಹುದು. ಪ್ರತಿವಾದಿಯು ಒತ್ತುವರಿ ಮಾಡಿ ಶೆಡ್ಡನ್ನು ಹಾಕಿದ ಸಮಯದಲ್ಲಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿರುತ್ತದೆ. ಆ ಬಗ್ಗೆ ಯಾವುದೇ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ ಆದರೆ ವಾದಿಯು ಕೊಟ್ಟಿರಬಹುದು. ಅ ರೀತಿಯಾಗಿ ಯಾವುದೇ ಗಲಾಟೆಯಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಈರಪ್ಪ ಢವಳೇಶ್ವರ್)
**2 ನೇ.ಹೆ.ಪ್ರಃದಃನ್ಯಾಃದಂ.,ರವರು,**
**ಕಡೂರು.**